**ದಿನಾಂಕಃ 28.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ಅಪಘಾತವಾದಾಗ ನನ್ನ ಜೊತೆ ಬೇರೆ ಯಾರೂ ಇರಲಿಲ್ಲ. ಅಪಘಾತವಾದ ನಂತರ ಸಾರ್ವಜನಿಕರು ತುರ್ತು ವಾಹನದ ಮೂಲಕ ಆಸ್ಪತ್ರೆಗೆ ಸೇರಿಸಿರುತ್ತಾರೆ. ಅಪಘಾತವಾದ ನಂತರ ನನಗೆ ಪ್ರಜ್ಞೆ ಇರಲಿಲ್ಲ. ಪ್ರಜ್ಞೆ ಬಂದ ನಂತರ ಅಪಘಾತ ಹೇಗೆ ಸಂಭವಿಸಿತು ಎಂದು ವೈದ್ಯರಿಗೆ ಹೇಳಿಲ್ಲ. ನನ್ನನ್ನು ಆಸ್ಪತ್ರೆಗೆ ಸೇರಿಸಿದವರು ಅಪಘಾತವನ್ನು ನೋಡಿದ್ದಾರೋ, ಇಲ್ಲವೋ ನನಗೆ ಗೊತ್ತಿಲ್ಲ. ನಾನು ಹೋಗುತ್ತಿದ್ದ ದ್ವಿಚಕ್ರ ವಾಹನ ನನಗೆ ಸೇರಿದ್ದು. ಸದರಿ ದ್ವಿಚಕ್ರ ವಾಹನಕ್ಕೆ ವಿಮೆ ಇತ್ತು. ವಾಹನಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಮತ್ತು ವಿಮಾ ಪಾಲಿಸಿಯ ಪ್ರತಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನನಗೆ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಪರವಾನಗಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ವಾಹನಕ್ಕೆ ವಿಮೆ ಮತ್ತು ನನಗೆ ಪರವಾನಗಿ ಇಲ್ಲದೇ ಇದ್ದರೂ ಸಹ ಇದೇ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ರಾತ್ರಿ 8-8.30 ಗಂಟೆಯ ಸಮಯದಲ್ಲಿ ಸಂಭವಿಸಿರುತ್ತದೆ. ನನಗೆ ಮದ್ಯ ಸೇವನೆ ಮಾಡುವ ಹವ್ಯಾಸ ಇದೆ ಎಂದರೆ ಸರಿಯಲ್ಲ. ಆ ದಿನ ನಾನು ಮದ್ಯ ಸೇವನೆ ಮಾಡಿ ವಾಹನ ಚಾಲನೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ.

ನಾನು ಬಿ.ಎಸ್ಸಿ ಪಧವಿ ಮಾಡಿರುತ್ತೇನೆ. ಅಪಘಾತವಾದ ಕೂಡಲೇ ದೂರು ನೀಡಬೇಕು ಎಂಬ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ನನಗೆ ಪ್ರಜ್ಞೆ ಇಲ್ಲದ ಕಾರಣ ಕೂಡಲೇ ದೂರು ನೀಡಿಲ್ಲ ಎಂದು ನುಡಿಯುತ್ತಾರೆ. ನಮ್ಮ ಮನೆಯಲ್ಲಿ ಒಟ್ಟು 5 ಜನ ವಾಸವಾಗಿದ್ದೇವೆ. ಅಪಘಾತದ ಬಗ್ಗೆ ನಮ್ಮ ಕುಟುಂಬವರಿಗೆ ತಿಳಿದಿರುತ್ತದೆ. ನನ್ನ ಮನೆಯಿಂದ ವಿಶ್ವನಾಥಪುರಕ್ಕೆ 4 ಕಿ.ಮೀ ಮತ್ತು ಬ್ಯಾಡರಹಳ್ಳಿಗೆ ಸುಮಾರು 5 ಕಿ.ಮೀ ಅಂತರ ಇದೆ. ನನಗೆ ಧನುಷ್ ರವರ ಪರಿಚಯ ಇಲ್ಲ.

ಇನ್ನೊಂದು ದ್ವಿಚಕ್ರ ವಾಹನ ನನಗೆ ಡಿಕ್ಕಿಪಡಿಸಿದ ಬಗ್ಗೆ ವೈದ್ಯಕೀಯ ದಾಖಲಾತಿಗಳಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ 2ನೇ ಎದುರುದಾರರ ಜೊತೆ ಶಾಮೀಲಾಗಿ 7 ದಿನಗಳ ನಂತರ ತಡವಾಗಿ ಸುಳ್ಳು ದೂರು ನೀಡಲಾಗಿದೆ ಎಂದರೆ ಸರಿಯಲ್ಲ. ನನಗೆ 2ನೇ ಎದುರುದಾರರ ಪರಿಚಯ ಇದ್ದು, ಅದರ ಮೇರೆಗೆ ನನ್ನ ಮನವಿಯಂತೆ ಅವರು ನನಗೆ ಪರಿಹಾರ ಪಡೆಯಲು ಸಹಕಾರ ನೀಡುವ ಉದ್ದೇಶದಿಂದ ಸಹಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸ್ ದಾಖಲಾತಿಗಳನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಆಪಾದಿತ ಬೈಕು ಅಪಘಾತದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ಆದ ಕಾರಣ 1ನೇ ಎದುರುದಾರರು ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಚಿಕಿತ್ಸೆಗೆ ಮತ್ತು ಇತರೆ ಖರ್ಚುಗಳಿಗೆ ನಾನು ಹೇಳಿರುವಷ್ಟು ಹಣವನ್ನು ವ್ಯಯಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಆರೋಗ್ಯ ವಿಮೆಯ ಸೌಲಭ್ಯ ಇದೆ ಎಂದರೆ ಸರಿ. ನಿಪಿ 8 ರ ಕ್ರಮ ಸಂಖ್ಯೆ 82 ರ ದಾಖಲಾತಿ ಹಣ ನೀಡಿದ ಬಗ್ಗೆ ದಾಖಲಾತಿಯಾಗಿದ್ದು, ಅದು ದ್ವಿಪ್ರತಿ ಎಂದರೆ ಸಾಕ್ಷಿಯು ಅವರು ನೀಡಿದ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯಲ್ಲಿ ನಮೂದಿಸಿದ ಹಣವನ್ನು ನಾನು ಪಾವತಿಸಿಲ್ಲ ಎಂದರೆ ಸರಿಯಲ್ಲ. ಸದರಿ ಹಣವನ್ನು ನಗದು ರೂಪದಲ್ಲಿ ಪಾವತಿಸಿರುತ್ತೇವೆ. ವಿವರವಾದ ಬಿಲ್ಲನ್ನು ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಆಸ್ಪತ್ರೆಯವರು ನೀಡುತ್ತಿಲ್ಲ ಎಂದು ನುಡಿಯುತ್ತಾರೆ. ಆಸ್ಪತ್ರೆಗೆ ಸಂಬಂಧಪಟ್ಟ ವ್ಯಕ್ತಿಯನ್ನು ವಿಚಾರಣೆಗೆ ಒಳಪಡಿಸಲು ತೊಂದರೆ ಇಲ್ಲ. ಆಸ್ಪತ್ರೆಯ ವೆಚ್ಚಗಳು ನಮ್ಮ ಕುಟುಂಬದ ವಿಮೆಯ ಮೂಲಕ ಮರುಪಾವತಿಯಾಗಿದೆ ಎಂದರೆ ಸಾಕ್ಷಿಯು ಸ್ವಲ್ಪ ಮಾತ್ರ ಮರುಪಾವಯಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ 8 ರ ಕ್ರಮ ಸಂಖ್ಯೆ 82 ರ ಮೂಲ ಪ್ರತಿಯನ್ನು ನಾನು ವೆಚ್ಚವನ್ನು ಮರುಪಾವತಿ ಮಾಡಿಕೊಳ್ಳಲು ಸಂಬಂಧಪಟ್ಟ ವಿಮಾ ಕಂಪನಿಗೆ

ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 8 ರ ಕ್ರಮ ಸಂಖ್ಯೆ 81 ರ ದಾಖಲಾತಿ ವಾಹನದ ರಿಪೇರಿಗೆ ಸಂಬಂದಪಟ್ಟ ಖರ್ಚಿನ ದಾಖಲಾತಿ ಆಗಿರುತ್ತದೆ. ಚಿಕಿತ್ಸೆ ಪಡೆಯುವ ಸಂದರ್ಭದಲ್ಲಿ ಔಷಧಗಳನ್ನು ಆಸ್ಪತ್ರೆಗಳಲ್ಲಿಯೇ ನೀಡುತ್ತಿದ್ದರು ಎಂದರೆ ಸರಿಯಲ್ಲ. ನಿಪಿ 8 ರ ಕ್ರಮ ಸಂಖ್ಯೆ 4 ರಿಂದ 80 ವರೆಗಿನ ಮೊತ್ತ ಕ್ರಮ ಸಂಖ್ಯೆ 82ರ ದಾಖಲಾತಿಯಲ್ಲಿ ಒಳಗೊಂಡಿದೆ ಎಂದರೆ ಸರಿಯಲ್ಲ. ನಿಪಿ 8 ಅನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನಗೆ ಯಾವುದೇ ಮೂಳೆ ಮುರಿತ ಉಂಟಾಗಿಲ್ಲ ಎಂದರೆ ಸರಿಯಲ್ಲ.  ನನಗೆ ಶಸ್ತ್ರ ಚಿಕಿತ್ಸೆ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ಉಂಟಾದ ಗಾಯಗಳು ವಾಸಿಯಾಗಿವೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನಗೆ ಸಣ್ಣಪುಟ್ಟ ಗಾಯಗಳು ಆಗಿದ್ದವು ಎಂದರೆ ಸರಿಯಲ್ಲ. ನಾನು ಮೊದಲಿನಂತೆ ಈಗಲೂ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ನ್ಯಾಯಾಲಯದಲ್ಲಿ ಇರುವ ಎರಡು ಫೋಟೋಗಳನ್ನು ತೋರಿಸಿ ಅದು ಯಾರದ್ದು ಎಂದು ಕೇಳಲಾಗಿ ಸಾಕ್ಷಿಯು ಶ್ರೀ ಡಾ|| ಬಿ.ಆರ್ ಅಂಬೇಡ್ಕರ್ ಮತ್ತು ಮಹಾತ್ಮ ಗಾಂಧೀಜಿ ರವರ ಫೋಟೋ ಆಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಜನ್ಮ ದಿನಾಂಕ 09.05.2000 ಆಗಿರುತ್ತದೆ. 2021ರಲ್ಲಿ ನಾನು ಪಧವಿ ಮುಗಿಸಿರುತ್ತೇನೆ. ನನ್ನ ಮನೆಯ ಸದಸ್ಯರ ಹೆಸರುಗಳನ್ನು ಹೇಳಲು ಆಗುತ್ತದೆ. ನನಗೆ 15-16 ವಯಸ್ಸು ಆಗಿದ್ದಾಗ ನನ್ನ ಅಕ್ಕನ ವಿವಾಹ ಆಗಿರುತ್ತದೆ. ನನ್ನ ಅಣ್ಣ ನನಗಿಂತ ಎರಡು ವರ್ಷ ದೊಡ್ಡವರು. 2023-24ರಲ್ಲಿ ನನ್ನ ಅಣ್ಣ ಎಂ.ಎಸ್ಸಿ ಮುಗಿಸಿರುತ್ತಾನೆ. ನ್ಯಾಯಾಲಯದಲ್ಲಿ ಪ್ರಕರಣ ಕರೆಯುವವರು ಕುಳಿತಿರುವಂತಹ ಖುರ್ಚಿಯ ಬಣ್ಣ ನೀಲಿ ಮತ್ತು ಕಪ್ಪು ಆಗಿರುತ್ತದೆ.

ನಾನು ಪಾನ್ ಕಾರ್ಡನ್ನು ಹೊಂದಿದ್ದು, ಬ್ಯಾಂಕ್ ಖಾತೆಯೂ ಸಹ ಇರುತ್ತದೆ. ಸದರಿ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಮತ್ತು ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಕೆಲಸ ಮತ್ತು

ಆದಾಯಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಮತ್ತು ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಈಗಲೂ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಆರ್ಥಿಕ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ನನಗೆ 26 ವರ್ಷ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**